ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ

**ಉಪಸ್ಥಿತರುಃ ಸಂತೋಷ ಕೊಠಾರಿ,**

**ಬಿ.ಎ.ಎಲ್., ಎಲ್.ಎಲ್.ಬಿ.,**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ವಿರಾಜಪೇಟೆ**

# ಸಿ. ಸಿ. ನಂ.517/2021

ಪಿರ್ಯಾದಿಃ ವ್ಯವಸ್ಥಾಪಕರು, ಕೆಡಿಸಿಸಿ ಬ್ಯಾಂಕ್,ಸಿದ್ದಾಪುರ ಶಾಖೆ,
ಪ್ರತಿನಿಧಿಸುವವರು ಹಾಲಿ ವ್ಯವಸ್ಥಾಪಕರು,
ಶ್ರೀ ಭಾಸ್ಕರ್ ಕೆ.ವಿ, ತಂದೆಃ ವೇಲಾಯುಧ, ಪ್ರಾಯ 53 ವರ್ಷ,
ಸಿದ್ದಾಪುರ, ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

(ಶ್ರೀಮತಿ ಸಿ.ಬಿ ಅನಿತಾ, ವಕೀಲರು)

***ವಿರುದ್ಧ***

ಆರೋಪಿಃ ಶ್ರೀ ಎಂ. ಹರೀಶ್, ತಂದೆಃ ಮುರುಗೇಶ್,
ವಾಸಃ ಪಾಲಿಬೆಟ್ಟ ರಸ್ತೆ ,ಸಿದ್ದಾಪುರ ಅಂಚೆ,
ವಿರಾಜಪೇಟೆ ತಾಲ್ಲೂಕು, ಕೊಡಗು ಜಿಲ್ಲೆ.

## ::ಆಪಾದನೆಯ ಸಾರಾಂಶ::

ಆರೋಪಿಯಾದ ನೀವು ಪಿರ್ಯಾದಿ ಬ್ಯಾಂಕಿನಿಂದ ಪಿ.ಎಂ ಮುದ್ರಾ ಸಾಲ ರೂ.1,00,000/-ವನ್ನು ಪಡೆದುಕೊಂಡಿದ್ದು, ಆರೋಪಿಯಾದ ನೀವು ಅದನ್ನು ತೀರಿಸುವ ಸಲುವಾಗಿ ಕೆನರಾ ಬ್ಯಾಂಕ್, ಸಿದ್ದಾಪುರ ಶಾಖೆಯ ಬ್ಯಾಂಕಿನ ತಮ್ಮ ಖಾತೆಗೆ ಸಂಬಂಧಿಸಿದ ಚೆಕ್ ನಂಬರ್ 991377, ದಿನಾಂಕಃ 30.01.2021 ರ ಚೆಕ್ ಅನ್ನು ರೂ.1,00854/- ನೀಡಿದ್ದು, ಪಿರ್ಯಾದಿ ಬ್ಯಾಂಕಿನವರು ಸದರಿ ಚೆಕ್ ಅನ್ನು ನಗದೀಕರಿಸುವ ಸಲುವಾಗಿ ಕೆನರಾ ಬ್ಯಾಂಕ್, ವಿರಾಜಪೇಟೆ ಶಾಖೆ ಮುಖಾಂತರ ಸಲ್ಲಿಸಿದಾಗ, ಸದರಿ ಚೆಕ್ "**Funds Insufficient and drawers signature differs** " ಎಂಬ ಕಾರಣ ನಮೂದಿಸಿ ದಿನಾಂಕಃ 03.02.2021 ರಂದು ಬ್ಯಾಂಕ್ ಹಿಂಬರಹದೊಂದಿಗೆ ಅಮಾನ್ಯಗೊಂಡ ಚೆಕ್ ಹಿಂದಿರುಗಿ ಬಂದಿರುತ್ತದೆ. ಚೆಕ್ ನಗದಾಗದೇ ಮರಳಿ ಬಂದ ನಂತರ ಪಿರ್ಯಾದಿ ನಿಮಗೆ ನೋಂದಾಯಿತ ಅಂಚೆಯ ಮೂಲಕ ತಮ್ಮ

ವಕೀಲರಿಂದ ದಿನಾಂಕಃ 15.02.2021ರಂದು ನೋಟೀಸ್ ಕಳುಹಿಸಿ ಚೆಕ್‌ನ ಹಣವನ್ನು ತಮಗೆ ಪಾವತಿಸಬೇಕೆಂದು ತಗಾದೆ ಮಾಡಿರುತ್ತಾರೆ. ಸದರಿ ನೋಟಿಸ್ ನಿಮಗೆ ಜಾರಿಯಾಗಿದ್ದರೂ ಸಹ ನೀವು ಚೆಕ್ ನ ಮೊತ್ತವನ್ನು ಪಿರ್ಯಾದಿ ಬ್ಯಾಂಕಿಗೆ ಪಾವತಿಸಿರುವುದಿಲ್ಲ ಆ ಮೂಲಕ ನೀವು ವರ್ಗಾವಣೀಯ ಲಿಖಿತಗಳ ಕಾಯಿದೆ 1881 ರ ವಿಧಿ 138 ರ ರೀತ್ಯಾ ದಂಡನೀಯವಾದ ಅಪರಾಧವೆಸಗಿರುವುದಾಗಿ ನಿಮ್ಮ ವಿರುದ್ಧ ಆಪಾದನೆ ಇದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶ ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2. ಮೇಲೆ ಓದಿ ಹೇಳಿದ ಆಪಾದನೆಯ ಸಾರಾಂಶವನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರಃ

(ಮೇಲಿನ ಆಪಾದನೆಯ ಸಾರಾಂಶವನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡು ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತಃ ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ದೃಡೀಕರಿಸುತ್ತೇನೆ.)

ಸಹಿಃ

(ಸಂತೋಷ ಕೊಠಾರಿ )

ದಿನಾಂಕಃ 28.10.2024

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ,

ವಿರಾಜಪೇಟೆ.